# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 102
ಸದಸ್ಯರ ಹೆಸರು : ಶ್ರೀ ಸಲೀಂ ಅಹಮದ್
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 13.02.2023
ಉತ್ತರಿಸುವ ಸಚಿವರು : ಗೃಹ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದ ರಾಜಧಾನಿಯಲ್ಲಿ ಕಳೆದ ನಾಲ್ಕು ವರ್ಷಗಳಿಂದ "ಹಿಟ್ ಅಂಡ್ ರನ್" ರಸ್ತೆ ಅಪಘಾತಗಳು ಎಷ್ಟು ಸಂಭವಿಸಿರುತ್ತವೆ;</td><td>
<table>
<tr><th>ವರ್ಷ</th><th>ಒಟ್ಟು ಹಿಟ್ ಅಂಡ್ ರನ್ ರಸ್ತೆ ಅಪಘಾತಗಳ ಸಂಖ್ಯೆ</th><th>ಮೃತಪಟ್ಟವರ ಸಂಖ್ಯೆ</th><th>ಗಾಯಗೊಂಡವರ ಸಂಖ್ಯೆ</th></tr>
<tr><td>2019</td><td>1601</td><td>284</td><td>1376</td></tr>
<tr><td>2020</td><td>979</td><td>212</td><td>837</td></tr>
<tr><td>2021</td><td>785</td><td>182</td><td>634</td></tr>
<tr><td>2022</td><td>1059</td><td>247</td><td>851</td></tr>
<tr><td>2023 (ಜನವರಿ ಅಂತ್ಯದವರೆಗೆ)</td><td>125</td><td>27</td><td>109</td></tr>
</table>
</td></tr>
<tr><td>ಆ)</td><td>ಈ ರೀತಿ ಸಂಭವಿಸಿದ ಅಪಘಾತಗಳಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಎಷ್ಟು ಮಾರಣಾಂತಿಕ ಮತ್ತು ಮಾರಣಾಂತಿಕವಲ್ಲದ ಪ್ರಕರಣಗಳು ವರದಿಯಾಗಿವೆ;</td><td>
<table>
<tr><th rowspan="2">ವರ್ಷ</th><th colspan="3">ಹಿಟ್ ಅಂಡ್ ರನ್ ರಸ್ತೆ ಅಪಘಾತಗಳು</th></tr>
<tr><th>ಮಾರಣಾಂತಿಕ ಅಪಘಾತ ಪ್ರಕರಣಗಳು</th><th>ಮಾರಣಾಂತಿಕವಲ್ಲದ ಅಪಘಾತ ಪ್ರಕರಣಗಳು</th><th>ಒಟ್ಟು ಅಪಘಾತ ಪ್ರಕರಣಗಳು</th></tr>
<tr><td>2019</td><td>284</td><td>1317</td><td>1601</td></tr>
<tr><td>2020</td><td>191</td><td>788</td><td>979</td></tr>
<tr><td>2021</td><td>178</td><td>607</td><td>785</td></tr>
<tr><td>2022</td><td>229</td><td>830</td><td>1059</td></tr>
<tr><td>2023 (ಜನವರಿ ಅಂತ್ಯದವರೆಗೆ)</td><td>26</td><td>99</td><td>125</td></tr>
</table>
</td></tr>
<tr><td>ಇ)</td><td>ಈ "ಹಿಟ್ ಅಂಡ್ ರನ್" ಅಪಘಾತ ಪ್ರಕರಣಗಳಿಗೆ ಪ್ರಮುಖ ಕಾರಣಗಳೇನು; ಈ ಅಪಘಾತಗಳನ್ನು ಮಾಡಿ ಪರಾರಿಯಾದ ಎಷ್ಟು ಚಾಲಕರನ್ನು ಕಂಡು ಹಿಡಿದು ವಿಚಾರಣೆಗೆ ಒಳಪಡಿಸಿ ಕಾನೂನು ಕ್ರಮವನ್ನು ಕೈಗೊಳ್ಳಲಾಗಿದೆ; ಇನ್ನೂ ಎಷ್ಟು ಚಾಲಕರು ತಲೆಮರೆಸಿಕೊಂಡಿದ್ದಾರೆ; ಇವರನ್ನು ಪತ್ತೆ ಹಚ್ಚಲು ಸರ್ಕಾರ ಕೈಗೊಂಡ ಕ್ರಮವೇನು;</td><td>ಹಿಟ್ ಅಂಡ್ ರನ್ ಅಪಘಾತಗಳಿಗೆ ಪ್ರಮುಖ ಕಾರಣಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.<br>➢ ಅಪಘಾತ ಉಂಟಾದಾಗ ತನ್ನ ತಪ್ಪನ್ನು ಸಾರ್ವಜನಿಕರು ಗಮನಿಸಿ ಹಲ್ಲೆ ಮಾಡಬಹುದೆಂಬ ಭಾವನೆ ಮತ್ತು ಹೆದರಿಕೆ.<br>➢ ಅಪಘಾತ ಉಂಟಾದಾಗ ಏನು ಮಾಡಬೇಕೆಂಬ ಬಗ್ಗೆ ದ್ವಂದ್ವ ಉಂಟಾಗಿ ತೀರ ಹತ್ತಿರದವರನ್ನು ಕೇಳಿ ತಿಳಿದುಕೊಳ್ಳಲು ಸ್ಥಳದಿಂದ ಪರಾರಿಯಾಗುತ್ತಾರೆ.<br>➢ ಅಪಘಾತ ಉಂಟು ಮಾಡಿದ ಚಾಲಕನು/ಸವಾರನ ಚಾಲನಾ ಅನುಜ್ಞಾ ಪತ್ರ ಮತ್ತು ದಾಖಲಾತಿಗಳು ಇಲ್ಲದೇ ಇರುವುದು.<br>➢ ಅಪಘಾತ ಪ್ರಕರಣದಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದಲೂ ಪರಾರಿಯಾಗಿರುತ್ತಾರೆ.</td></tr>
</table>

| ವರ್ಷ | ದಾಖಲಾದ ಪ್ರಕರಣಗಳ ಸಂಖ್ಯೆ | ಪತ್ತೆಯಾದ ಪ್ರಕರಣಗಳ ಸಂಖ್ಯೆ | ಪತ್ತೆಯಾಗದ ಪ್ರಕರಣಗಳ ಸಂಖ್ಯೆ |
|---|---|---|---|
| 2019 | 1601 | 1101 | 500 |
| 2020 | 979 | 659 | 320 |
| 2021 | 785 | 616 | 169 |
| 2022 | 1059 | 892 | 167 |
| 2023 (ಜನವರಿ ಅಂತ್ಯದವರೆಗೆ) | 125 | 94 | 31 |

**ಹಿಟ್ ಅಂಡ್ ರನ್ ಪ್ರಕರಣಗಳಲ್ಲಿ ತಲೆಮರೆಸಿಕೊಂಡಿರುವವರನ್ನು ಪತ್ತೆ ಹಚ್ಚಲು ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ.**

- ಹಿಟ್ ಅಂಡ್ ರನ್ ಪ್ರಕರಣಗಳಲ್ಲಿ ಪರಾರಿಯಾದ ವಾಹನ ಚಾಲಕರು/ ಸವಾರರುಗಳನ್ನು ಪತ್ತೆ ಹಚ್ಚಲು ಅಪಘಾತ ಸಂಭವಿಸಿದ ಸ್ಥಳದಲ್ಲಿ ಲಭ್ಯವಿರುವ ಸಾಕ್ಷಿದಾರರು ಹಾಗೂ ಸಿ.ಸಿ. ಟಿ.ವಿ. ದೃಶ್ಯವಳಿಗಳ ಮೂಲಕ ಪತ್ತೆ ಹಚ್ಚಲು ಕ್ರಮ ಕೈಗೊಂಡಿರುತ್ತದೆ.
- ಹಿಟ್ ಅಂಡ್ ರನ್ ಪ್ರಕರಣಗಳ ಪತ್ತೆ ಕಾರ್ಯಕ್ಕಾಗಿಯೇ ಠಾಣಾ ಮಟ್ಟದಲ್ಲಿ ಪ್ರತ್ಯೇಕ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ನೇಮಿಸಿ ಪ್ರಕರಣಗಳ ಪತ್ತೆ ಹಚ್ಚಲು ಕ್ರಮ ಕೈಗೊಂಡಿರುತ್ತದೆ.
- ಅಪಘಾತ ನಡೆದ ಸ್ಥಳದಲ್ಲಿನ ಸುತ್ತಮುತ್ತಲಿನಲ್ಲಿ ವಾಸಿಸುವ ಸಾರ್ವಜನಿಕರು ಹಾಗೂ ಅಪಘಾತ ನಡೆದ ಸ್ಥಳದಲ್ಲಿ ಸಂಚರಿಸುವ ವಾಹನ ಚಾಲಕರುಗಳ ವಿಚಾರಣೆ ಮಾಡುವ ಕಾರ್ಯವನ್ನು ಕೈಗೊಳ್ಳಲಾಗುತ್ತಿರುತ್ತದೆ.

| | | |
|---|---|---|
| ಈ) | ಇಂತಹ ಪ್ರಕರಣಗಳಲ್ಲಿ ಪ್ರಾಣವನ್ನು ಕಳೆದುಕೊಂಡ ಅಮಾಯಕ ಸಾರ್ವಜನಿಕರಿಗೆ/ ಅವರ ಕುಟುಂಬಗಳಿಗೆ ನ್ಯಾಯವನ್ನು ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮವೇನು; | ಪೊಲೀಸ್ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ಇವರ ಕಛೇರಿ ಸುತ್ತೋಲೆ ಸಂಖ್ಯೆ :ಸಿಟಿಆರ್-2/43/2021-22, ದಿನಾಂಕ:17.03.2022 ರನ್ವಯ ಹಿಟ್ ಅಂಡ್ ರನ್ ಪ್ರಕರಣಗಳಲ್ಲಿ ಪ್ರಾಣವನ್ನು ಕಳೆದುಕೊಂಡ ಅಮಾಯಕ ಸಾರ್ವಜನಿಕರಿಗೆ/ ಅವರ ಕುಟುಂಬಗಳಿಗೆ Solatium Scheme ಅಡಿಯಲ್ಲಿ ಜಿಲ್ಲಾಧಿಕಾರಿಗಳ ಕಛೇರಿಗೆ ಅರ್ಜಿಯನ್ನು ಸಲ್ಲಿಸಿ, ಗಾಯಾಳುಗಳು ರೂ.50,000/-ಗಳನ್ನು ಹಾಗೂ ಮೃತಪಟ್ಟ ಅವಲಂಬಿತ ಕುಟುಂಬ ಸದಸ್ಯರು ರೂ.2,00,000/-ಗಳ ಪರಿಹಾರವನ್ನು ಪಡೆಯಬಹುದಾಗಿರುತ್ತದೆ. |

**ಹೆಚ್‌ಡಿ 57 ಎಸ್‌ಎಸ್‌ಟಿ 2023**

**(ಆರಗ ಜ್ಞಾನೇಂದ್ರ)**
ಗೃಹ ಸಚಿವರು